**ಸಾಕ್ಷಿಯನ್ನು ದಿಃ 12.08.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 7 ನೇ ಪ್ರತಿವಾದಿಯ ಪರ ವಕೀಲರಾದ ಶ್ರೀ ಕೆ ಆರ್ ವಿ ವಕೀಲರಿಂದಃ**

1) ನಾನು ಎಂ ಕಾಂ ಪದವೀಧರೆ. ನ್ಯಾಯಾಲಯದಲ್ಲಿ ಹಾಜರಿರುವ ವ್ಯಕ್ತಿ ಬಸವರಾಜು ಆಗಿದ್ದು ಅವರು ನನ್ನ ತಾತನ 2ನೇ ಹೆಂಡತಿ ಮಗ. ನನ್ನ ತಂದೆ ದಾವೆ ಹೂಡಿದ್ದು, ದಾವೆಯ ಬಗ್ಗೆ ತಿಳಿದುಕೊಂಡಿದ್ದೇನೆ. ದಾವೆ ಸಲ್ಲಿಸುವ ಸಮಯದಲ್ಲಿ 2ನೇ ಪ್ರತಿವಾದಿಯ ಹೆಸರನ್ನು ಬೋಜೇಗೌಡ ಬಿನ್ ಲೇಟ್ ನಂಜೇಗೌಡ ಎಂದು ಬರೆಸಿದ್ದೀರ ಎಂದರೆ ಸಾಕ್ಷಿ ಅವರು ನನ್ನ ಚಿಕ್ಕಪ್ಪ. ನನಗೆ ಬೋಜೇಗೌಡ ಎಂಬ ಹೆಸರಿನ ಒಬ್ಬ ಚಿಕ್ಕಪ್ಪ ಇದ್ದಾರೆ. ದಾವಾ ಶಿರೋನಾಮೆಯಲ್ಲಿ 5 ಮತ್ತು 7ನೇ ಪ್ರತಿವಾದಿಯರ ಹೆಸರನ್ನು ಒಂದೇ ಬರೆಸಿದ್ದೇವೆ ಎಂದರೆ ಸರಿಯಲ್ಲ.

2) ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಗೊತ್ತು. 1 ಮತ್ತು 7ನೇ ಪ್ರತಿವಾದಿ ಪ್ರತಿವಾದ ಪತ್ರದಲ್ಲಿ ಏನು ಬರೆಸಿದ್ದಾರೆ ಎಂದು ಗೊತ್ತಿಲ್ಲ. ನನ್ನ ತಂದೆ ಮೃತಪಟ್ಟಾಗ ಎಷ್ಟು ವಯಸ್ಸಾಗಿತ್ತು ಎಂದು ಗೊತ್ತಿಲ್ಲ. ನಂತರ 58 ಅಥವಾ 59 ವರ್ಷ ಆಗಿರಬಹುದು ಎನ್ನುತ್ತಾರೆ. ಈ ದಾವೆಯನ್ನು ಜಮೀನಿನ ಸ್ವಾಧೀನಕ್ಕಾಗಿ ಹೂಡಿರುತ್ತೇವೆ.

ಅದರ ವಿಸ್ತೀರ್ಣ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ದಾವಾ ಒಟ್ಟು 30 ಗುಂಟೆ ಕೇಳಿರುತ್ತೇವೆ. ದಾವಾ ಸ್ವತ್ತುಗಳಲ್ಲಿ ಯಾರು ಸ್ವಾಧೀನದಲ್ಲಿದ್ದಾರೆ ಎಂದು ಗೊತ್ತಿಲ್ಲ. ನನ್ನ ತಂದೆಗೆ ಸದರಿ ಸ್ವತ್ತುಗಳು ಹೇಗೆ ಬಂದಿದೆ ಎಂದರೆ ಸಾಕ್ಷಿ ವಿಭಾಗದ ಮೂಲಕ ಬಂದಿದೆ ಎನ್ನುತ್ತಾರೆ. ಯಾವ ವರ್ಷದಲ್ಲಿ ವಿಭಾಗ ಆಗಿರುತ್ತದೆ ಎಂದು ಗೊತ್ತಿಲ್ಲ. ನನ್ನ ತಂದೆ ಮೃತಪಟ್ಟಾಗ ಕುಣಿಗಲ್ ನಲ್ಲಿ ಇದ್ದರು. ನಾನು ಅಮ್ಮಸಂದ್ರದಲ್ಲಿದ್ದೆ. ನಾನು ಹುಟ್ಟಿದಾಗಿನಿಂದ ಬೆಂಗಳೂರಿನಲ್ಲಿ ವಾಸವಿದ್ದು ನಂತರ ನನ್ನ ತಾಯಿಯ

ಊರಾದ ಅಮ್ಮಸಂದ್ರಕ್ಕೆ ಹೋಗಿರುತ್ತೇನೆ. ನನ್ನ ತಂದೆಗೆ ಸ್ವತ್ತು ವಿಭಾಗದ ಮೂಲಕ ಬಂದಿರುತ್ತದೆ ಎಂದು ನನ್ನ ತಾಯಿ ನನಗೆ ತಿಳಿಸಿರುತ್ತಾರೆ.

3) ನನ್ನ ತಾತ ಮೊದಲನೇ ಹೆಂಡತಿ ಹೊನ್ನಮ್ಮ ಮೃತಪಟ್ಟ ನಂತರ 1ನೇ ಪ್ರತಿವಾದಿಯನ್ನು ಮದುವೆ ಆಗಿರುತ್ತಾರೆ ಎಂದರೆ ಸರಿ. ಯಾರ ಯಾರ ನಡುವೆ ವಿಭಾಗ ಆಗಿರುತ್ತದೆ ಎಂದು ಗೊತ್ತಿಲ್ಲ. ಭಾಗ ಆದ ದಾಖಲೆಯನ್ನು ನಾನು ಓದಿರುತ್ತೇನೆ. 6ನೇ ಪ್ರತಿವಾದಿ ತನ್ನ ಸ್ವತ್ತನ್ನು ಉಳಿದ ವಾದಿ ಮತ್ತು ಪ್ರತಿವಾದಿಯವರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂಬ ಬಗ್ಗೆ ಗೊತ್ತಿಲ್ಲ. ಈಗೆ ತನ್ನ ಹಕ್ಕನ್ನು ಬಿಟ್ಟುಕೊಟ್ಟಿದ್ದರೂ ವಿನಾಃ ಕಾರಣ 6ನೇ ಪ್ರತಿವಾದಿಯರನ್ನು ಪಕ್ಷಗಾರರನ್ನಾಗಿ ಮಾಡಿದ್ದೀರಿ ಎಂದರೆ ಸಾಕ್ಷಿ ಅದರ ಬಗ್ಗೆ ಮಾಹಿತಿ ಇಲ್ಲ ಎನ್ನುತ್ತಾರೆ.

4) ನಾನು ಬೆಂಗಳೂರಿನಲ್ಲಿ ವಾಸವಿದ್ದಾಗ ನನ್ನ ತಾಯಿ ಮತ್ತು ತಂದೆಯ ನಡುವೆ ಯಾವುದೇ ಮಾತುಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ದಾವೆ ಹೂಡಿದ ನಂತರ ದಾವಾ ಸ್ವತ್ತುಗಳಲ್ಲಿ ಯಾರು ಸ್ವಾಧೀನ ಇದ್ದಾರೆ ಎಂದು ನಾನು ಖುದ್ದು ನೋಡಿಲ್ಲ. ನೋಡಿ ತಿಳಿದುಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸರಿ. ರಾಜೀ ಡಿಕ್ರಿ ದಾವೆಯಲ್ಲಿ ನನ್ನ ತಂದೆಯನ್ನು  ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಎಷ್ಟನೇ ಪಕ್ಷಗಾರರಾಗಿದ್ದರು ಎಂದು ಗೊತ್ತಿಲ್ಲ. ಸದರಿ ರಾಜೀ ಡಿಕ್ರಿಗೆ ನನ್ನ ತಂದೆ ಸಹಿ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ರಮೇಶ್ ರವರು ಬಂದ ನಂತರ ಬಿಟ್ಟುಕೊಡುವುದಾಗಿ ಬರೆಸಲಾಗಿತ್ತು ಎನ್ನುತ್ತಾರೆ.

5) ನನ್ನ ತಂದೆ ತಾಯಿ ಮದುವೆ ನಂತರ ವಾಸಕ್ಕೆ ಬೆಂಗಳೂರಿಗೆ ಹೋಗಿರುತ್ತಾರೆ ಎಂದರೆ ಸರಿ. ನನ್ನ ತಂದೆ ಯಾಳನಹಳ್ಳಿಗೆ ಹೋಗಿ ಬಂದು ಮಾಡುತ್ತಿದ್ದರು. ನನ್ನ ತಂದೆ ನನ್ನ ಜೊತೆ ಬೆಂಗಳೂರಿನಲ್ಲಿ ಸುಮಾರು 10-12 ವರ್ಷ ಇದ್ದರು. ನಂತರ ನಾವೆಲ್ಲರೂ ವ್ಯಾಪಾರದ ಉದ್ದೇಶದಿಂದ ಅಮ್ಮಸಂದ್ರಕ್ಕೆ ಬಂದಿರುತ್ತೇವೆ. ನನ್ನ ತಂದೆ ನನ್ನ ತಾಯಿಯೊಂದಿಗೆ ಜಗಳ

ಮಾಡಿಕೊಂಡು ನಮ್ಮನ್ನು ಬಿಟ್ಟುಹೋಗಿದ್ದು ನಮ್ಮ ಜೊತೆ ಇರಲಿಲ್ಲ ಎಂದರೆ ಸರಿಯಲ್ಲ. ಇದೇ ಕಾರಣಕ್ಕೆ ರಾಜೀ ಡಿಕ್ರಿ ದಾವೆಯಲ್ಲಿ ನನ್ನ ತಂದೆಯನ್ನು ಪಕ್ಷಗಾರನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

6) ನನ್ನ ತಂದೆಯ ಕುಟುಂಬಕ್ಕೆ ಎಷ್ಟು ಸ್ವತ್ತು ಇದೆ ಎಂದು ಗೊತ್ತಿಲ್ಲ. ಕೆಲವು ಪಿತ್ರಾರ್ಜಿತ ಮತ್ತು ಕೆಲವು ಮಂಜೂರಾದ ಸ್ವತ್ತುಗಳು ಇದ್ದವು. ಯಾವ ಯವಾ ಸ್ವತ್ತುಗಳು  ಪಿತ್ರಾರ್ಜಿತ ಸ್ವತ್ತು ಮತ್ತು ಯಾವ ಸ್ವತ್ತುಗಳು ಮಂಜೂರಾದ ಸ್ವತ್ತುಗಳು ಎಂದು ಗೊತ್ತಿಲ್ಲ. ಅದೇ ರೀತಿ ಯಾರ ಹೆಸರಿಗೆ ಮಂಜೂರಾಗಿದೆ ಎಂದರೆ ನನ್ನ ತಾತನ ಹೆಸರಿಗೆ ಮಂಜೂರಾಗಿದೆ ಎನ್ನುತ್ತಾರೆ. ಇಸವಿ ಗೊತ್ತಿಲ್ಲ. ನನ್ನ ತಂದೆ ತಾಯಿ ಬಗ್ಗೆ ದಿನಾಂಕ ಗೊತ್ತಿಲ್ಲ. ನಾನು 1989 ರಲ್ಲಿ ಜನಿಸಿರುತ್ತೇನೆ. ನನ್ನ ತಂದೆ ತಾಯಿ ಮದುವೆಯಾದ 5 ವರ್ಷದ ನಂತರ ನಾನು ಜನಿಸಿರುತ್ತೇನೆ. ನನ್ನ ತಂದೆ ಅವರ ಮದುವೆಗೂ ಮೊದಲು ಬೆಂಗಳೂರಿನಲ್ಲಿ ವಾಸವಿದ್ದರು ಎಂದರೆ ಗೊತ್ತಿಲ್ಲ. ಈ ವಿಚಾರವನ್ನು ನನ್ನ ತಾಯಿಯಿಂದ ತಿಳಿದುಕೊಂಡಿದ್ದೇನೆ. ನನ್ನ ತಾಯಿಗೆ ಆರೋಗ್ಯದ ಸಮಸ್ಯೆ ಇದ್ದು ನ್ಯಾಯಾಲಯಕ್ಕೆ ಹಾಜರಾಗಲು ಸಾಧ್ಯವಿಲ್ಲ.

7) ನನ್ನ ತಂದೆ ದುಶ್ಚಟಗಳಿಗೆ ಒಳಗಾಗಿ ಸುಮಾರು 25 ವರ್ಷಗಳ ಹಿಂದೆಯಿಂದಲೇ ಕುಟುಂಬದ ಕಷ್ಟ ಸುಖಗಳಿಗೆ ಭಾಗಿಯಾಗದೇ ಬೇರೆ ಇದ್ದರು ಎಂದರೆ ಗೊತ್ತಿಲ್ಲ. ರಾಜೀ ಡಿಕ್ರಿಯಲ್ಲಿ ಮನೆಯ ಸ್ವತ್ತನ್ನು ಸಹ ಸೇರಿಸಲಾಗಿದೆ. ರಾಜೀ ಡಿಕ್ರಿಯಲ್ಲಿ ತಾತನ ಮರಣಾ ನಂತರ ಮನೆಯನ್ನು ನನ್ನ ತಂದೆ ಮತ್ತು ಪ್ರತಿವಾದಿಯರು ಹಂಚಿಕೊಳ್ಳತಕ್ಕದು ಎಂದು ಬರೆಸಿದ್ದಾರೆ ಎಂದರೆ ಸರಿ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಗೊತ್ತಿಲ್ಲ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ.

8) 7ನೇ ಪ್ರತಿವಾದಿ ಅಸಲು ದಾವಾ ಸಂಖ್ಯೆ 121/2008 ರಂತೆ ದಾವೆ ಹೂಡಿ ದಾವಾ ಸ್ವತ್ತುಗಳನ್ನು ಒಳಗೊಂಡಂತೆ ದಾವಾ ಐಟಂ 3 ರ ಸ್ವತ್ತನ್ನು ಬಿಟ್ಟು ರಾಜೀ ಮಾಡಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ರಾಜೀ ಅರ್ಜಿಯಲ್ಲಿ ದಾವಾ ಐಟಂ ನಂ 3 ರ ಸ್ವತ್ತನ್ನು ಯಾವ ಕಾರಣಕ್ಕೆ ಸೇರಿಸಿಲ್ಲ

ಎಂಬ ಬಗ್ಗೆ ತಿಳಿದುಕೊಂಡಿಲ್ಲ. ದಾವಾ ಐಟಂ ನಂ 3 ರ ಸ್ವತ್ತು ನನ್ನ ತಾತನ ಸ್ವಯಾರ್ಜಿತ ಸ್ವತ್ತಾಗಿರುವುದರಿಂದ ರಾಜೀ ಅರ್ಜಿಯಲ್ಲಿ ಸೇರಿಸಿಲ್ಲ ಎಂದರೆ ಗೊತ್ತಿಲ್ಲ. ದಾವಾ ಸ್ವತ್ತುಗಳನ್ನು 2018 ರಲ್ಲಿ ನನ್ನ ತಂದೆ ನೋಡಿರುತ್ತಾರೆ. ಪ್ರತಿವಾದಿ ಖಾತಾ ಬದಲಾವಣೆ ಮಾಡಿಕೊಂಡಿರುವ ಬಗ್ಗೆ ನೀವು ಎ.ಸಿ ಅಥವಾ ಡಿ.ಸಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದೀರ ಎಂದರೆ ನನ್ನ ತಂದೆ ಸಲ್ಲಿಸಿದರು ಎನ್ನುತ್ತಾರೆ. ಸದರಿ ಅರ್ಜಿಗಳು ನನ್ನ ತಂದೆಯ ಪರವಾಗಿ ಆಗಿರುತ್ತದೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ.

9) ರಾಜೀ ಡಿಕ್ರಿಯಲ್ಲಿ ನನ್ನ ತಾತ ನಂಜೇಗೌಡರ ಹೆಸರಿಗೆ ಕೆಲವು ಸ್ವತ್ತನ್ನು ನೀಡಲಾಗಿತ್ತು ಎಂದರೆ ಗೊತ್ತಿಲ್ಲ. ಸದರಿ ಸ್ವತ್ತುಗಳನ್ನು ನನ್ನ ತಾತ ಪರಭಾರೆ ಮಾಡಬಾರದು ಎಂದು ನುಮೂದಿಸಿಲ್ಲ ಎಂದರೆ ಗೊತ್ತಿಲ್ಲ. ದಾವಾ ಐಟಂ ನಂ 4 ರ ಸ್ವತ್ತನ್ನು ನನ್ನ ತಾತ ಪೌತಿಯಾದ ನಂತರ 1ನೇ ಪ್ರತಿವಾದಿ ಪೌತಿ ಆದಾರದ ಮೇಲೆ ಅವರ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿ. 1ನೇ ಪ್ರತಿವಾದಿಯ ಯೋಗಕ್ಷೇಮವನ್ನು 7ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿ ವಯೋಸಹಜ ಖಾಯಿಲೆಯಿಂದ ಬಳಲುತ್ತಿದ್ದಾರೆ ಎಂದರೆ ಗೊತ್ತಿಲ್ಲ. 1ನೇ ಪ್ರತಿವಾದಿಗೆ ವೈದ್ಯಕೀಯ ಚಿಕಿತ್ಸೆಯನ್ನು 7ನೇ ಪ್ರತಿವಾದಿ ಕೊಡಿಸುತ್ತಿದ್ದಾರೆ ಎಂದರೆ ಇರಬಹುದು. 1ನೇ ಪ್ರತಿವಾದಿಯನ್ನು 7ನೇ ಪ್ರತಿವಾದಿ ನೋಡಿಕೊಳ್ಳುತ್ತಿರುವುದರಿಂದ ದಾವಾ ಐಟಂ ನಂ 4 ರ ಸ್ವತ್ತನ್ನು 7ನೇ ಪ್ರತಿವಾದಿಗೆ ದಾನಪತ್ರ ಮಾಡಿರುತ್ತಾರೆ ಎಂದರೆ ಸರಿ. ದಾನಪತ್ರದ ಆಧಾರದ ಮೇಲೆ 7ನೇ ಪ್ರತಿವಾದಿಯೇ ಕಂದಾಯ ಕಟ್ಟುತ್ತಿದ್ದಾರೆ ಎಂದರೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ದಾವೆ ಹೂಡಿದ ನಂತರ ದಾನಪತ್ರ ಅಗಿದೆ ಎನ್ನುತ್ತಾರೆ.

10) ದಾವಾ ಸ್ವತ್ತುಗಳಲ್ಲಿ ನಮಗೆ ಯಾವುದೇ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಯೋಗಕ್ಷೇಮವನ್ನು ನಾನಾಗಲಿ ನನ್ನ ತಂದೆಯಾಗಲಿ ನೋಡಿಕೊಳ್ಳದ ಕಾರಣ ದಾವಾ ಐಟಂ 4 ರಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ 4 ರ ಸ್ವತ್ತನ್ನು

ನನ್ನ ತಾತ ಮರಣ ಹೊಂದಿದ ನಂತರ ಯಾರು ಯಾರು ವಿಭಾಗ ಮಾಡಿಕೊಳ್ಳಬೇಕೆಂದು ರಾಜೀ ಅರ್ಜಿಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ಇದೇ ಕಾರಣಕ್ಕೆ 1ನೇ ಪ್ರತಿವಾದಿ 7ನೇ ಪ್ರತಿವಾದಿಗೆ ದಾವಾ ಐಟಂ ನಂ 4 ರ ಸ್ವತ್ತನ್ನು ದಾನಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾನಪತ್ರವನ್ನು ಈ ದಾವೆಯಲ್ಲಿ ಪ್ರಶ್ನಿಸಿಲ್ಲ. ದಾನಪತ್ರ ಆಗಿರುವ ಬಗ್ಗೆ 2 ವರ್ಷದ ಹಿಂದೆ ತಿಳಿಯಿತು.

11) ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ಕುಣಿಗಲ್ ನಲ್ಲಿ ಕಲ್ಯಾಣಮ್ಮ ನವರು ಪಡೆದಿರುತ್ತಾರೆ. ಕಲ್ಯಾಣಮ್ಮ ಮತ್ತು ನನ್ನ ತಂದೆಗೆ ಯಾವ ಸಂಬಂಧ ಎಂದು ಗೊತ್ತಿಲ್ಲ. ನನ್ನ ತಾಯಿಯೊಂದಿಗೆ ವೈಮನಸ್ಸು ಬಂದಿದ್ದರಿಂದ ನನ್ನ ತಂದೆ ಕಲ್ಯಾಣಮ್ಮ ರವರನ್ನು ಮದುವೆ ಆಗಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ನನ್ನ ತಂದೆಯ ಮರಣ ಪ್ರಮಾಣ ಪತ್ರದಲ್ಲಿ ಹೆಂಡತಿ ಹೆಸರನ್ನು ಕಲ್ಯಾಣಮ್ಮ ಎಂದು ತೋರಿಸಲಾಗಿದೆ ಎಂದರೆ ಸರಿ. ಕಲ್ಯಾಣಮ್ಮ ಅವರಿಗೆ ಭಾಗ ನೀಡಬೇಕಾಗುತ್ತದೆ ಎಂಬ ಉದ್ದೇಶದಿಂದ ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಕುಸುಮ ವಿ.)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**